**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯು, ತರೀಕೆರೆ.**

**ಸಿ.ಸಿ.ನಂ.873-2017**

ಪಿ.ಡಬ್ಲ್ಯೂ:1

ಸಿ.ಡಬ್ಲ್ಯೂ:1

ಹೆಸರು : ಪಾರ್ವತಮ್ಮ

ಗಂಡನ ಹೆಸರು : ಮಹೇಶ್ವರಪ್ಪ

ವಯಸ್ಸು : 43 ವರ್ಷ

ಉದ್ಯೋಗ : ಕೂಲಿಕೆಲಸ,

ವಾಸಸ್ಥಳ : ಬಂಕನಕಟ್ಟೆ

**ದಿನಾಂಕ.06-03-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ಚಾಸಾ-2 ನನ್ನ ತಾಯಿ. ಚಾಸಾ-5 ರಿಂದ 8 ಹಾಗೂ ಆರೋಪಿತರ ಪರಿಚಯವಿದೆ. ಈಗ್ಗೆ 3 ವರ್ಷಗಳ ಹಿಂದೆ ನಾನು ಮತ್ತು ಚಾಸಾ-2 ರವರು ನಮ್ಮ ಮನೆಯಲ್ಲಿ ಇದ್ದಾಗ ಸಂಜೆ ಸುಮಾರು 5.30 ಗಂಟೆ ಸಮಯದಲ್ಲಿ ನಮ್ಮ ಮನೆಯ ಹಿಂಭಾಗದಲ್ಲಿ ಆರೋಪಿತರು ಶೌಚಾಲಯವನ್ನು ಕಟ್ಟಿಸಲು ಮರಳು ಕಲ್ಲುಗಳನ್ನು ನಮ್ಮ ಖಾಲಿ ಜಾಗದಲ್ಲಿ ಹಾಕಿದ್ದು ಅದನ್ನು ತೆಗೆದುಕೊಳ್ಳುವಂತೆ ಆರೋಪಿತರಿಗೆ ಹೇಳಿದಾಗ ಅವರು ನನಗೆ ಮತ್ತು ಚಾಸಾ-2 ರವರಿಗೆ ಕೈಗಳಿಂದ ಹಲ್ಲೆ ಮಾಡಿರುತ್ತಾರೆ. ನಂತರ ನಮ್ಮ ಮನೆಯಲ್ಲಿ ಇದ್ದ ಬಿಸಿ ಸಾಂಬಾರು ಪಾತ್ರೆಯ ಮೇಲೆ ನಮ್ಮನ್ನು ನೂಕಿ ಗಾಯಗೊಳಿಸಿರುತ್ತಾರೆ. ಆರೋಪಿತರು ನನಗೆ ಮತ್ತು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಈ ಬಗ್ಗೆ ನಾನು ಆರೋಪಿತರ ವಿರುದ್ಧ ದೂರು ಸಲ್ಲಿಸಿರುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆ ದಿನ ನಮ್ಮ ಮನೆಯಲ್ಲಿ

ಇದ್ದ ಸಾಂಬಾರು ಪಾತ್ರೆ ಹಾಗೂ ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಸ.ಸ.ಅ. ರವರಿಂದ.**

2. ಆರೋಪಿತರು ನನಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ನಿಜ.

**ಪಾಟೀಸವಾಲು ಃ ಆರೋಪಿ ಪರ ವಕೀಲರು** ಶ್ರೀ.ಇ.ಪಿ.ಪಿ ವಕೀಲರಿಂದಃ-

3. ನಮ್ಮ ಮತ್ತು ಆರೋಪಿತರ ನಡುವೆ ಬಹಳ ವರ್ಷಗಳಿಂದ ವೈಷಮ್ಯವಿದೆ. ಚಾಸಾ-2 ನನ್ನ ತಾಯಿಯಾಗಿದ್ದು, ನಮ್ಮ ನಡುವೆ ದ್ವೇಷವಿರುವ ಕಾರಣ ಅವರ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ನಡುವೆ ಯಾವುದೇ ಗಲಾಟೆಯಾಗದಿದ್ದರೂ ಸಹ ನಾನು ಹಿರಿಯ ಹೆಂಡತಿಯ ಮಗಳಾಗಿದ್ದು 1 ನೇ ಆರೊಪಿ ಕಿರಿಯ ಹೆಂಡತಿಯ ಮಗನಾಗಿದ್ದರಿಂದ ಅವರ ವಿರುದ್ಧ ದೂರು ಕೊಟ್ಟಿರುತ್ತೇನೆ ಎಂದರೆ ನಿಜ.

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.